


International Journal of Kannada Research
www.kannadajournal.com

**ISSN: 2454–5813**
IJKR 2018; 4(2): 132-134
© 2018 IJKR
www.kannadajournal.com
Received: 24-02-2018
Accepted: 25-03-2018

**ಸೌಮ್ಯ ಕೆ.ಸಿ**
ಸಹಾಯಕ ಪ್ರಾಧ್ಯಾಪಕರು,
ಕೊಡಚಾದ್ರಿ ಸರ್ಕಾರಿ
ಪ್ರಥಮದರ್ಜೆಕಾಲೇಜು,
ಹೊಸನಗರ

**Correspondence**
**ಸೌಮ್ಯ ಕೆ.ಸಿ**
ಸಹಾಯಕ ಪ್ರಾಧ್ಯಾಪಕರು,
ಕೊಡಚಾದ್ರಿ ಸರ್ಕಾರಿ
ಪ್ರಥಮದರ್ಜೆಕಾಲೇಜು,
ಹೊಸನಗರ

# ಕರುಣಾಳು ರಾಘವನಲ್ಲಿತಪ್ಪಿಲ್ಲವೆ....?

**ಸೌಮ್ಯ ಕೆ.ಸಿ**

ಮಹಿಳಾ ಅಧ್ಯಯನದ ಮೂಲಕ ಸ್ತ್ರೀಯ ಬದುಕಿನತಲ್ಲಣದ ಬೇರೆ ಬೇರೆ ಆಯಾಮಗಳನ್ನು ಹಾಗೂ ಅದರಿಂದ ಸ್ತ್ರೀಗೆ ದೊರೆಯಬಹುದಾದ ಹೊರನೋಟಗಳೆಡೆಗೆ ಬೆಳಕು ಚೆಲ್ಲುವ ಪ್ರಯತ್ನ ಯಶಸ್ವಿಯಾಗಿ ನಡೆಯುತ್ತಾ ಬಂದಿದೆ. ಹೆಣ್ಣು ಸಮಾಜದಕಣ್ಣು, ಆಕೆ ತ್ಯಾಗಮಯಿ, ಮಮತಾಮಯಿ, ಧೀ ಶಕ್ತಿ ಹೊಂದಿದವಳು ಎಂದು ಹೇಳುತ್ತಲೇ ಸಮಾಜದ ಕಣ್ಣಿಗೆ ಆಕೆಯನ್ನು ದುರ್ಬಲೆಯನ್ನಾಗಿಸಿರುವರು. ಅನೇಕ ಶತಮಾನಗಳಿಂದ ಆಕೆ ಶೋಷಿತಳು. ಪುರುಷನಂತೆ ಸ್ತ್ರೀಯೂ ಸಮಾಜದ ಅವಿಭಾಜ್ಯ ಅಂಗ. ಆದರೂ ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಸ್ತ್ರೀಯನ್ನು ಪ್ರಧಾನವೆಂದು ಎಲ್ಲೂ ಗುರುತಿಸಿಲ್ಲ. ಜಗತ್ತಿನ ಇತಿಹಾಸದ ಪುಟಗಳನ್ನು ತೆರೆದರೆ ಅಲ್ಲೆಲ್ಲ ಕಾಣುವುದು ಪ್ರಧಾನವಾಗಿ ಪುರುಷ ಕೇಂದ್ರಿತ ಕಥಾನಕವಾಗಿದೆ. ಅವನ ಸೋಲು ಗೆಲುವುಗಳ ಚರಿತ್ರೆಯಾಗಿದೆ. ಈ ಕಥೆಗಳ ನಿರ್ಮಾತೃಗಳೂ ಪುರುಷರೇ ಆಗಿರುವರು. ಕನ್ನಡ ಸಾಹಿತ್ಯವನ್ನು ಅವಲೋಕಿಸಿದರೆ ಸಂಚಿ ಹೊನ್ನಮ್ಮನಿಂದ ಮಹಿಳಾ ಸಾಹಿತ್ಯ ಪರಂಪರೆಯ ಅವಲೋಕನ ಸಾಧ್ಯವಾಗುತ್ತದೆ. ಸಾಹಿತ್ಯದಲ್ಲಿ ಒಂದು ವೇಳೆ ಪ್ರಾಮುಖ್ಯತೆ ದೊರೆತಿದ್ದರೂ ನಾಯಕಿಯರೆನಿಸಿಕೊಳ್ಳುವ ಪಾತ್ರಗಳಿಗೆ ಮಾತ್ರವೇ ಆಗಿದೆ. ಇದಕ್ಕೆ ಕಾರಣ ಸಂಪ್ರದಾಯ ಹಾಗೂ ಧರ್ಮದ ಹಿಡಿತವೇ ಆಗಿದೆ. ಈ ಸಂದರ್ಭದಲ್ಲಿ ಮಹಿಳೆ ಮಹಿಳೆಯಾಗಿರುವ ಕಾರಣಕ್ಕೆ ಅನೇಕ ತಲ್ಲಣಗಳನ್ನು ಸಮಸ್ಯೆಗಳನ್ನು ಎದುರಿಸುತ್ತಿದ್ದಾಳೆ. ಕಾಲದಿಂದ ಕಾಲಕ್ಕೆ ಭಿನ್ನವಾಗುತ್ತಾ ಬಂದಂತಹ ಆಕೆಯ ಸ್ಥಾನಮಾನಗಳೇನು? ಎಂಬುದನ್ನು ಗುರುತಿಸುವ ಪ್ರಯತ್ನಗಳು ಇಂದು ನಡೆಯುತ್ತಲೇ ಇವೆ.

ಹೀಗೆ ಕಾಲಘಟ್ಟಗಳಲ್ಲಿ ಭಿನ್ನವಾಗುತ್ತಾ ಬಂದಂತಹ ಮಹಿಳಾ ಅಸ್ತಿತ್ವವನ್ನು ಅವಲೋಕಿಸಲು ನಮ್ಮ ನಡುವಿರುವ ಪ್ರಮುಖ ಆಕರಗಳೆಂದರೆ ಸಾಹಿತ್ಯ ಕೃತಿಗಳು. ಅದರಲ್ಲಿಯೂ ರಾಮಾಯಣ ಮತ್ತು ಮಹಾಭಾರತ ಕೃತಿಗಳು ಭಾರತೀಯರ ಪ್ರಾಚೀನ ಸಂಸ್ಕೃತಿಯನ್ನು ಬಿಂಬಿಸುವ ಮಹಾಕಾವ್ಯಗಳು. ವೈದಿಕ ಪರಂಪರೆಯ ಪ್ರಧಾನಧಾರೆಯಿಂದ ರೂಪುಗೊಂಡ ಪುರಾಣ ಮಹಾಕಾವ್ಯಗಳಾದ ರಾಮಾಯಣ ಮತ್ತು ಮಹಾಭಾರತಗಳು ಕಾಲಾತೀತವಾಗಿದ್ದು ಈ ಕೃತಿಗಳು ಇಂದಿಗೂ ಪ್ರಸ್ತುತವೇ. ನಮ್ಮ ಸಾಮಾಜಿಕ ವ್ಯವಸ್ಥೆಯೊಳಗೆ ಪುರುಷ ಮತ್ತು ಮಹಿಳೆ ಇಬ್ಬರೂ ಅತ್ಯಗತ್ಯ. ಆದರೆ ಪುರುಷನನ್ನು ಮಹಾಕಾವ್ಯಗಳು ಬಿಂಬಿಸುವ ನೋಟಕ್ಕೂ ಮಹಿಳೆಯನ್ನು ಚಿತ್ರಿಸುವ ರೀತಿಗೂ ಭಿನ್ನತೆಗಳಿವೆ.

ವಾಲ್ಮೀಕಿ ಕೃತ ರಾಮಾಯಣವು ಕನ್ನಡದಲ್ಲಿ ಮೊದಲು ಕೇವಲ ಲಕ್ಷ್ಯ ಪದ್ಯಗಳಲ್ಲಿ ಮಾತ್ರ ಇಣುಕುತ್ತದೆ. ಶ್ರೀ ವಿಜಯನ ಕವಿರಾಜಮಾರ್ಗ, ನಾಗವರ್ಮನ ಕಾವ್ಯಾವಲೋಕನ, ಕೇಶಿರಾಜನ ಶಬ್ದಮಣಿದರ್ಪಣ, ಸೂಕ್ತಿ ಸುಧಾರ್ಣವದಲ್ಲಿ ಕೆಲವು ಲಕ್ಷ್ಯ ಪದ್ಯಗಳಿವೆ. ಇವುಗಳನ್ನು ಹೊರತುಪಡಿಸಿದರೆ ಪೊನ್ನನ ಭುವನೈಕ ರಾಮಾಭ್ಯುದಯ ಕೃತಿ, 10ನೇ ಶತಮಾನದ ಚಾವುಂಡರಾಯನ ಚಾವುಂಡರಾಯಪುರಾಣ, 11 ಶತಮಾನದಲ್ಲಿನ ನಾಗಚಂದ್ರನ ಪಂಪರಾಮಾಯಣ, 13ನೇ ಶತಮಾನದಲ್ಲಿನ ಕುಮದೇಂದುರಾಮಾಯಣ, 15ನೇ ಶತಮಾನದ ತೊರವೆ ನರಹರಿಯ ತೊರವೆರಾಮಾಯಣ, 16ನೇ ಶತಮಾನದಲ್ಲಿನ ಕವಿ ಲಕ್ಷ್ಮೀಶನ ಜೈಮಿನಿ ಭಾರತ ಹೀಗೆ ಇಡಿಯಾಗಿ ರಾಮಾಯಣದ ವಸ್ತುವನ್ನು ತಮ್ಮ ಕಾವ್ಯದಲ್ಲಿ ಬಳಸಿಕೊಂಡ ಪ್ರಾಚೀನ ಹಾಗೂ ಮಧ್ಯಕಾಲೀನ ಕವಿಗಳನ್ನು ಗುರುತಿಸಬಹುದು. ರಾಮಾಯಣದ ಈ ಪರಂಪರೆಯು ಆಧುನಿಕ ಕಾಲಘಟ್ಟಕ್ಕೂ ಹಬ್ಬಿ ಅನೇಕ ವಿಶೇಷತೆಗಳ ಮೂಲಕ ಸಹೃದಯರ ಮಾನಸದಲ್ಲಿ ಅಚ್ಚೊತ್ತಿವೆ. ಈ ರಾಮಾಯಣ ಪರಂಪರೆಯಲ್ಲಿ 16ನೇ ಶತಮಾನದಲ್ಲಿನ ಕವಿ ಲಕ್ಷ್ಮೀಶನು ರಚಿಸಿರುವ ಜೈಮಿನಿ ಭಾರತವು ಸಂಸ್ಕೃತದ ಜೈಮಿನಿಭಾರತದ ಸಂಗ್ರಹರೂಪದ ಅನುವಾದವಾಗಿದೆ. ಜೈಮಿನಿ ಮುನಿಯು ರಾಮಾಯಣದ ಆರು ಕಾಂಡಗಳ ಕಥೆಯನ್ನು ಬಳಸಿಕೊಳ್ಳದೆ ಉತ್ತರಕಾಂಡದ ಕತೆಯಿಂದ ವಸ್ತುವನ್ನು ಆಯ್ದುಕೊಂಡಿರುವರು. ಲಕ್ಷ್ಮೀಶನು ಹದಿನೆಂಟನೆಯ

ಸಂಧಿಯಿಂದ ಮೊದಲ ಷಟ್ಪದಿಗಳಲ್ಲಿ ರಾಮಾಯಣದ ಆರು ಕಾಂಡಗಳ ಕಥೆಯನ್ನು ಸಂಗ್ರಹಿಸಿ ಹೇಳುವನು. ಆದರೆ ಉತ್ತರಕಾಂಡದ ಕಥೆಯನ್ನು ವಿಸ್ತಾರವಾಗಿ ಪ್ರಚುರಪಡಿಸಿರುವನು. ಅದರಲ್ಲಿಯೂ ಅರ್ಜುನ ಹಾಗೂ ಬಭ್ರುವಾಹನರ ಯುದ್ಧದ ನೆವದಲ್ಲಿ ರಾಮಾಯಣದ ಸೀತಾ ಪರಿತ್ಯಾಗದ ಕಥೆಯನ್ನು ಕವಿ ಚಿತ್ರಿಸುತ್ತಾನೆ. ಉತ್ತರರಾಮಾಯಣದ ಕಥಾಪ್ರಸಂಗ ನಿಜವಾಗಿ ಆರಂಭಗೊಳ್ಳುವುದು ಸೀತಾ–ರಾಮರ ಸಂತಾನದ ಬಯಕೆಯಿಂದ. ಸಂತಾನವಿಲ್ಲದ್ದಕ್ಕೆ ರಾಮನು ವ್ಯಕ್ತಪಡಿಸುವ ಆತಂಕವನ್ನೂ ಸೀತೆಯ ಪ್ರತಿಕ್ರಿಯೆಯನ್ನೂ ಕವಿಯು ತನ್ನ ಕಾಲಧರ್ಮಕ್ಕನುಗುಣವಾಗಿ ಕೃತಿಯಲ್ಲಿ ಚಿತ್ರಿಸಿದ್ದಾನೆ. "ಸಿರಿಯಿರ್ದುದಾರವಂಶಕೆಕುವರನಿಲ್ಲದೊಡೆಮೆರೆದಪುದೇ" ಎಂದು ರಾಮನಾಡುವ ಮಾತುಗಳು ರಾಮನು ಅವತಾರ ಪುರುಷನೇ ಆದರೂ ಬಯಸುವುದು ಕುವರನನ್ನೇ ಹೊರತು ಕುವರಿಯನ್ನಲ್ಲ ಎನ್ನುವುದು ಸ್ಪಷ್ಟ. ಸೀತೆಯ ಅಭಿಪ್ರಾಯವೂ ಇದಕ್ಕೆ ಹೊರತಾಗಿಲ್ಲ.

"ಪುತ್ರವತಿಯಹುದುಜನ್ಮಾಂತರದ ಪುಣ್ಯಮೈಸಲೇ ಪೆಣ್ಗೆ ಮುನ್ನತಾಂ ನೋಂತುದಲ್ಲದೇ ಬಂದಪುದೇ ಬರಿದೆ ಬಯಸಿದೊಡೆ ಸುಕುಮಾರನಂ ಪೊಡೆಯೊಳ್" ಎನ್ನುತ್ತಾಳೆ. ಪುತ್ರವತಿಯಾಗುವಲ್ಲಿ ಅದರ ಹೊಣೆ ಹೆಣ್ಣಿನದ್ದು ಮಾತ್ರವೇ? ಭ್ರೂಣದ ಲಿಂಗ ನಿರ್ಧಾರಕ ಅಂಶಗಳು ಗಂಡಿನಿಂದಾಗಿಯೇ ಹೊರತು ಹೆಣ್ಣಿನಿಂದಲ್ಲ ಎಂದು ಆಧುನಿಕ ವೈದ್ಯ ವಿಜ್ಞಾನ ಸಾರಿ ಸಾರಿ ಹೇಳಿದರೂ ಇನ್ನೂ ಹೆಣ್ಣನ್ನೇ ಹೊಣೆಯನ್ನಾಗಿ ಮಾಡುತ್ತಿದೆ ನಮ್ಮ ಸಮಾಜ. ಅಲ್ಲದೇ ಸೀತಾ–ರಾಮರ ಬಯಕೆಯೂ ಪುತ್ರನದ್ದೇ ಆಗಿದೆ.

ಲಕ್ಷ್ಮೀಶನ ಜೈಮಿನಿ ಭಾರತದಲ್ಲಿ ರಾಮನಿಂದ ತಿರಸ್ಕೃತಳಾದ ಸೀತೆಯು ವನವಾಸದ ಸಂದರ್ಭದಲ್ಲಿ ಆತನ ಜೊತೆಯಾಗಿ ಇದ್ದರೂ ಅಗಸನ ಮಾತಿಗೆ ಇಂಬುಕೊಟ್ಟು ಆಕೆಗೆ ವಿಷಯ ತಿಳಿಸದೇ ಋಷಿ ಪತ್ನಿಯರೊಂದಿಗೆ ಇದ್ದು ಬರಬೇಕೆಂದಿದ್ದ ಅವಳ ಆಸೆಯನ್ನು ಈಡೇರಿಸುವವನಂತೆ ಲಕ್ಷ್ಮಣನೊಂದಿಗೆ ಕಾಡಿಗೆ ಕಳುಹಿಸುವನು. ಇಲ್ಲಿ ಕವಿ ಮೂಲಕಥೆಗೆ ನಿಷ್ಠನಾಗಿದ್ದಾನೆ. ಕಾಡಿಗೆ ಹೊರಡುವ ಮುನ್ನ ರಾಮನನ್ನು ಭೇಟಿಯಾಗುವ ಸಂದರ್ಭ ಜೈಮಿನಿ ಭಾರತದಲ್ಲೂ ಇಲ್ಲ. ಕವಿ ತನ್ನ ಆರಾಧ್ಯ ದೈವ ರಾಮನಿಗಾಗುವ ಮುಜುಗರವನ್ನು ತಪ್ಪಿಸಲು ಆ ಸನ್ನಿವೇಶವನ್ನು ತಾನೂ ರಚಿಸದೇ ಮುಂದೆ ಸಾಗಿದ್ದಾನೆ. ದಾರಿಯಲ್ಲಿ ಆಕೆಗೆ ಅಪಶಕುನಗಳು ಎದುರಾದಾಗ ಸೀತೆಯು 'ಒಳಿತಾಗಲಿರಾಮನಾಯುಷ್ಯಕೆ' ಎನ್ನುವ ಸೀತೆಯ ಮಾತುಗಳಲ್ಲಿ ತನಗೆ ಏನೇ ಆದರೂ ಪತಿಯ ಒಳಿತನ್ನೇ ಚಿಂತಿಸುವ ಹೆಣ್ಣಿನ ಆದರ್ಶವನ್ನು ಮೆಚ್ಚಿಕೊಳ್ಳುವುದೋ? ಇಲ್ಲ ಆಕೆಯನ್ನು ಈ ಸ್ಥಿತಿಗೆ ತಂದವರನ್ನು ಕಂಡು ಕೆಂಡಕಾರುವುದೋ? ಅದನ್ನು ಒಪ್ಪಿಕೊಂಡ ಕವಿಯನ್ನು ಏನೆನ್ನುವುದೋ?. ಲಕ್ಷ್ಮಣ ಘೋರಡವಿಗೆ ಕರೆದೊಯ್ದಾಗ ಸೀತೆಯು ಪ್ರಶ್ನಿಸುವಳು. ಅಲ್ಲಿಯವರೆಗೂ ದುಃಖವನ್ನು ಒತ್ತಿರಿಸಿಕೊಂಡ ಲಕ್ಷ್ಮಣ ಕೊನೆಗೂ ಇರುವ ಸತ್ಯವನ್ನು ಹೇಳಿಯೇ ಬಿಡುವನು.

ವಿಷಯ ತಿಳಿದ ಸೀತೆಯು "ಬಿರುಗಾಳಿ ಪೊಡೆಯಲ್ಕೆ ಕಂಪಿಸಿ ಫಲಿತಕದಳಿ

> ಮುರಿದಿಳೆಗೊರಗುವಂತೆ ಲಕ್ಷ್ಮಣ ಮಾತು ಕಿವಿ
> ದೆರೆಗೆ ಬೀಳದ ಮುನ್ನ ಹಮ್ಮೈಸಿ ಬಿದ್ದಳಂಗನೆ ಧರೆಗೆ
> ನಡುನಡುಗುತ...

ಎಂದು ಸೀತೆಯ ಆಗಿನ ಸ್ಥಿತಿಯನ್ನು ಕವಿಯ ಈ ಸಾಲು ಅರ್ಥಪೂರ್ಣವಾಗಿ ಧ್ವನಿಸುತ್ತವೆ. ತುಂಬು ಗರ್ಭಿಣಿಯಾದ ಸೀತೆಯ ಸ್ಥಿತಿಯದು. ಆದರೆ ಈ ಹೋಲಿಕೆಯಲ್ಲಿ ಸೀತೆ ದುರ್ಬಲೆ ಎಂಬ ಅಭಿಪ್ರಾಯವೂ ವ್ಯಕ್ತವಾಗಿದೆ.

"ಕೆಟ್ಟೆನಲ್ಲಾಯೆಂದೊರಲ್ದಳಬಲೆ…", "ಪೇಳೆಂದಳಲ್ದಳಬಲೆ…" ಎಂದು ಸೀತೆಯನ್ನು ಅಬಲೆಯೆಂದು ಹೇಳುತ್ತಾ ನಮ್ಮಲ್ಲಿ ಕರುಣಾರಸವನ್ನು ಉಕ್ಕಿಸುವಲ್ಲಿ ಶ್ರಮಿಸುವ ಕವಿಗೆ ಸೀತೆಯ ವ್ಯಕ್ತಿತ್ವಕ್ಕೆ ಇದರಿಂದ ನ್ಯಾಯ ದೊರಕುವುದಿಲ್ಲ ಎಂಬುದು ಅರಿವಿಗೆ ಬಂದಂತಿಲ್ಲ. ಲಕ್ಷ್ಮಣನ ಉಪಚರಿಸುವಿಕೆಯಿಂದ ಎಚ್ಚರಾದ ಆಕೆ ಹೇಳುವುದು 'ಕೈಗೆಖಡ್ಗವನ್ನಿತ್ತು ತನ್ನ ಅರಸಿಯನ್ನು ಹೊಯ್ಯೆಂದು ಹೇಳದೆ ಅಡವಿಯಲ್ಲಿ ಬಿಟ್ಟುಬಾ ಎಂದನಲ್ಲವೇ? ಅಯ್ಯಯ್ಯೋರಾಘವಂಕಾರುಣ್ಯನಿಧಿ' ಎಂಬಲ್ಲಿ ಸೀತೆಯ ಉದಾತ್ತತೆಗೆ ನಮ್ಮ ಮನಸ್ಸು ಕದಡುತ್ತದೆ. ರಾಮನ ಸಾಹಸಗಳನ್ನೆಲ್ಲಾ ನೆನೆದು ಆತನ ಸೌಂದರ್ಯವನ್ನು ಹೊಗಳುತ್ತಾ ಆತನಿಗಾಗಿಯೇ ಪರಿತಪಿಸುವಂತೆ ಮಾಡುವ ಕವಿ ಅಸಹಾಯಕಳಾದ ಸೀತೆಯನ್ನು ಚಿತ್ರಿಸುವಲ್ಲಿ ಯಶಸ್ವಿಯಾಗಿದ್ದಾನೆ. ಆದರೆ ಅವಳ ಶಕ್ತಿಯನ್ನು ಚಿತ್ರಿಸುವಲ್ಲಿ ಆತನಿಗೆ ಒಲವಿಲ್ಲ. ಅದಕ್ಕಾಗಿ ಆತನ ಶ್ರಮಿಸುವುದೂ ಇಲ್ಲ. ಲಕ್ಷ್ಮೀರಮಣನ ಭಕ್ತನಾದ ಕವಿಗೆ ಇಂತಹ ರಾಮ ಕಾರುಣ್ಯನಿಧಿಯಾಗಿಯೂ, ಕರುಣಾಳುವಾಗಿಯೂ ಕಾಣಿಸಿಕೊಂಡಿದ್ದಾನೆ. ಈ ಸಂದರ್ಭದಲ್ಲಿಯೂ ಕವಿಗೆ ಹೆಜ್ಜೆ ಹೆಜ್ಜೆಗೆ ರಾಮನ ನೆನಪೇ... ಅದಕ್ಕೆ ಸೀತೆಯನ್ನೂ ಲಕ್ಷ್ಮಣನನ್ನೂ ಬಳಸಿಕೊಳ್ಳುತ್ತಾನೆ.

ಆದರೆ ಅಲ್ಲಲ್ಲಿ ಲಕ್ಷ್ಮೀಶನೊಳಗಿನ ಕವಿ ಜಾಗೃತನಾಗಿ ಸೀತೆಯಲ್ಲಿ ಕೆಲವು ಪ್ರಶ್ನೆಗಳನ್ನು ಹುಟ್ಟಿಸುತ್ತಾನೆ. ಆ ಪ್ರಶ್ನೆಗಳಿಗೆ ಲಕ್ಷ್ಮಣನು ನಿರುತ್ತರನಾಗುವುದೊಂದೇ ನಮಗೆ ಸಮಾಧಾನದ ಸಂಗತಿ. ಅಗ್ನಿ ಪರೀಕ್ಷೆಯಂತಹ ದಾರುಣ ಪರೀಕ್ಷೆಯ ಮೂಲಕ ಪರಿಶುದ್ಧಳೆಂದು ಒಪ್ಪಿಕೊಂಡ ಮೇಲೂ ತನ್ನಲ್ಲಿ ಅಪರಾಧ ಕಾಣಿಸಿದನೇ ಎಂಬ ಭಾವ ಸುಳಿಯುತ್ತದೆ. ಮಿಥ್ಯಾರೋಪಕ್ಕೆ ಗುರಿಯಾದ ಮುಗ್ಧ ಮನಸ್ಸು ಆರೋಪದ ಬಗೆಗೆ ಅಚ್ಚರಿಗೊಳ್ಳುವುದು. ತಾನು ನಂಬಿದ್ದ ವ್ಯಕ್ತಿಯಿಂದ ಇದನ್ನು ಕಲ್ಪಿಸಿಕೊಳ್ಳಲೂ ಆಗದಿದ್ದಾಗ ಅನಿರೀಕ್ಷಿತವಾಗಿ ಉದ್ವೇಗಕ್ಕೊಳಗಾಗುವಳು. ಸ್ವಲ್ಪ ಸಮಯ ಧೃತಿಗೆಟ್ಟು ತನ್ನನ್ನು ತಾನು ಸಂಯಮಿಸಿಕೊಂಡು ನೊಂದ ಲಕ್ಷ್ಮಣನನ್ನೂ ಸಂತೈಸುವಳು. ನನ್ನನ್ನು ನಾನು ಕೊಂದುಕೊಳ್ಳೋಣವೆಂದರೆ 'ಬೆಂದೊಡಲೊಳಿದೆಬಸಿರದಂದುಗ' ವೆನ್ನುತ್ತಾ ಕಾಡಿನಲ್ಲಿ ತನ್ನ ಪಾಲಿಗೆ ಬಂದದ್ದನ್ನು ಸ್ವೀಕರಿಸಲು ಸಿದ್ಧಳಾಗುವಳು. ಗಂಡ ಜೊತೆಗಿಲ್ಲದಿದ್ದರೂ ಬದುಕಿನ ಪ್ರಶ್ನೆ ಬಂದಾಗ ಆಕೆಗೆ ಆಸರೆ ಮತ್ತೆ ಬಸಿರೊಳಗಿನ ಮಗು. ಸೀತೆಯ ಬದುಕಿನಲ್ಲಿ ಸದಾ ಗಂಡ, ಮಗು ಎಂಬುದನ್ನು ಹೊರತುಪಡಿಸಿ ಬೇರೆಯ ಆಯ್ಕೆಗಳೇ ಇಲ್ಲ. ಸೀತೆಗೆ ತನಗಾಗಿಯೇ ಬದುಕಬೇಕು ಎಂಬ ಯಾವ ಆಸೆಯೂ ಇಲ್ಲ. ಬಂದದ್ದನ್ನು ದಿಟ್ಟವಾಗಿ ಎದುರಿಸಲು ಆತ್ಮಸ್ಥೈರ್ಯ ತೆಗೆದುಕೊಂಡವಳಂತೆ ಕಂಡರೂ ಮತ್ತೆ 'ಲೋಕದರಸೇಗೈದೊಡಂತನ್ನಕಿಂಕರರ್ ಬೇಕುಬೇಡೆಂದು ಪೇಳರೆ ಭರತಶತ್ರುಘ್ನರೀಕೆಲಸಕೊಪ್ಪಿದರೇ ಹನುಮಂತನಿರ್ದಪನೆ ಪೇಳೆಂದಳಲ್ದಳಬಲೆ' ಎಂದು ಕವಿ ಲಕ್ಷ್ಮೀಶ ಸೀತೆಯ ಮನದ ತಳಮಳವನ್ನ ಅಭಿವ್ಯಕ್ತಿಸುವುದರೊಂದಿಗೆ ಸೀತೆ ಅಬಲೆ ಎಂಬುದನ್ನು ಕವಿ ನೇರವಾಗಿ ಹೇಳುವನು.

> ಮುಂದೆ ಸೀತೆಯೂ 'ಕರುಣಾಳುರಾಘವನಲ್ಲಿತಪ್ಪಿಲ್ಲ
> ಕಡುಪಾತಕಂಗೈದು ಪೆಣ್ಣಾಗಿ ಸಂಭವಿಸಿ
>
> ದೊಡಲಂಪೊರೆವುದೆನ್ನೊಳಪರಾಧಮುಂಟು'

ಎಂದುಕೊಳ್ಳುವುದರೊಂದಿಗೆ ಹೆಣ್ಣುಜನ್ಮವೆತ್ತಿದ ಕಾರಣಕ್ಕೆ ತಾನು ಅಪವಾದಗಳಿಗೆ ಗುರಿಯಾಗುತ್ತಿದ್ದೇನೆ ಎಂಬ ಮಾತು ಸ್ತ್ರೀ ಸಮುದಾಯವನ್ನೇ ಪ್ರತಿನಿಧಿಸಿ ನುಡಿದಂತಿದೆ. ಕವಿ

ಕುಮಾರವ್ಯಾಸನು "ಹೆಂಗಸು ಜನ್ಮವನು ಸುಡಲೀ.."ಎಂಬ ಮಾತುಗಳು ಈ ಸಂದರ್ಭದಲ್ಲಿ ನೆನಪಿಗೆ ಬರುತ್ತವೆ. ಅಸಹಾಯಕ ಸ್ಥಿತಿಯಲ್ಲಿ ಹೆಣ್ಣು ತನ್ನ ಜನ್ಮವನ್ನೇ ಶಪಿಸಿಕೊಳ್ಳುವಂಥಾ ಸ್ಥಿತಿ ಇಂದಿಗೂ ಬದಲಾಗದೇ ಇರುವುದು ದುರ್ದೈವ. ಸೀತೆ ದ್ರೌಪದಿಯಂತಹ ಸ್ತ್ರೀಯರೇ ತಮ್ಮ ಹುಟ್ಟಿನ ಬಗೆಗೆ ತಿರಸ್ಕಾರವನ್ನು ವ್ಯಕ್ತಪಡಿಸಿದಾಗ ಸಾಮಾನ್ಯ ಸ್ತ್ರೀಯರ ಪಾಡೇನು ಎಂಬ ಪ್ರಶ್ನೆ ಸದಾ ಕಾಡುತ್ತದೆ. ಇಂದಿಗೂ ವ್ಯವಸ್ಥೆಯ ಕಿರುಕುಳದಿಂದಾಗಿ ನೊಂದು ಅಸಹಾಯಕರಾಗಿ ಹೆತ್ತ ಮಕ್ಕಳನ್ನು ಬೆನ್ನಿಗೆ ಕಟ್ಟಿಕೊಂಡು ಪರಿತಪಿಸುವ ಸ್ಥಿತಿ ಬದಲಾಗಿಲ್ಲ.

ಮುಂದೆ ಶೋಕಗ್ರಸ್ತೆಯಾದ ಸೀತೆಯು ವಾಲ್ಮೀಕಿಯ ಕಣ್ಣಿಗೆ ಬಿದ್ದು ಆಶ್ರಮದಲ್ಲಿ ಆಶ್ರಯ ಪಡೆದು ಅವಳಿ ಮಕ್ಕಳಿಗೆ ಜನ್ಮವೀಯುತ್ತಾಳೆ. ವಾಲ್ಮೀಕಿಯಿಂದ ಶಿಕ್ಷಣ ಪಡೆದ ಮಕ್ಕಳು ರಾಮಚಾರಿತ್ರವನ್ನು ಅಭ್ಯಸಿಸುತ್ತಾರೆ. ಅಶ್ವಮೇಧದ ಕುದುರೆಯನ್ನು ಕಟ್ಟಿದ ಕಾರಣಕ್ಕೆ ಲವಕುಶರೊಂದಿಗೆ ಕಾಳಗ ನಡೆಯುತ್ತದೆ. ಲವಕುಶರೊಂದಿಗೆ ಕಾದಾಡಿ ರಾಮನ ಸೋದರರೆಲ್ಲಾ ಸೋತು ಸೊರಗಿದ ಸಂಗತಿ ತಿಳಿದ ಅಯೋಧ್ಯೆಯ ಮಂದಿ ಆಡುವ ಮಾತುಗಳು ಗಮನಾರ್ಹ–"ಜಾನಕಿಯನಂದು ಪೊರಮಡಿಸಿದನ್ಯಾಯದಿಂ ಭಾನುಕುಲ ಸಂಭವಂಗಾದವಿಂತೀತೆರದ ಹಾನಿಗಳ್.." ಎಂಬಲ್ಲಿ ಜನಮಾನಸದಲ್ಲಿ ಅಚ್ಚಳಿಯದೇ ಉಳಿದ ಸೀತಾ ಪರಿತ್ಯಾಗದ ದುರಂತದ ನೆನಪುಗಳನ್ನು ಕಾಣಬಹುದು. ಯುದ್ಧದಲ್ಲಿ ಈ ಮಕ್ಕಳು ರಾಮನನ್ನೇ ಸೋಲಿಸಿ ಕೊನೆಗೆ ಕ್ಷಮೆಯಾಚಿಸಿ ಅವನೊಡನೆ ಅಯೋಧ್ಯೆಗೆ ತೆರಳುವರು. ಸಂಪ್ರದಾಯದಂತೆ ಸೀತೆಯು ಇಲ್ಲಿ ಪ್ರತಿಭಟಿಸುವುದಿಲ್ಲ. ಸೀತೆಯನ್ನು ವಾಲ್ಮೀಕಿಯು ಒಡಂಬಡಿಸಿ ಜಾನಕೀಸಹಿತ ರಾಘವಂ ಸಾಮ್ರಾಜ್ಯಲೋಲನಾಗಿದ್ದುದನ್ನು ತಿಳಿಸುವುದರೊಂದಿಗೆ ಕಥೆ ಮುಗಿಯುವುದು. ಕಥೆಯು ಸುಖಾಂತ್ಯವೇ ಆದರೂ ನಮಗೆ ಮತ್ತೆ ಮತ್ತೆ ಕಾಡುವ ಪ್ರಶ್ನೆ ಕವಿಯು ಒಮ್ಮೆಯೂ ರಾಮನ ನಿರ್ಧಾರಕ್ಕೆ ಅಸಮ್ಮತಿ ವ್ಯಕ್ತಪಡಿಸದಿರುವುದು. ರಾಮನಿಂದ ಸೀತೆಯ ವ್ಯಕ್ತಿತ್ವ ಹರಣವಾದರೂ ಅದನ್ನು ಹೆಣ್ಣಾದವಳು ಒಪ್ಪಿಕೊಂಡು ಬದುಕಬೇಕೆಂಬ ಅಭಿಮತವೇ ವ್ಯಕ್ತವಾಗಿದೆ. ಪುರಾಣದ ಈ ಸಿದ್ಧ ಮಾದರಿಗಳನ್ನು ಮುರಿದುಕಟ್ಟುವ ಪ್ರಯತ್ನಗಳು ಆಧುನಿಕ ಕಾಲಘಟ್ಟದಲ್ಲಿ ನಡೆದಿವೆ ಹಾಗೂ ನಡೆಯುತ್ತಲಿವೆ. ಕುವೆಂಪುರವರ 'ಶ್ರೀರಾಮಾಯಣದರ್ಶನಂ', ಮೊಯಿಲಿಯವರ 'ಶ್ರೀರಾಮಾಯಣಮಹಾನ್ವೇಶಣಂ' ಮಹಾಕಾವ್ಯಗಳು ಸ್ತ್ರೀಸ್ವಾತಂತ್ರ್ಯದ ಆಶಯಗಳನ್ನು ವ್ಯಕ್ತಪಡಿಸುವ ಮೂಲಕ ಎಂದೋ ರೂಪಿತವಾದ ಪುರಾಣ ಗ್ರಂಥಗಳನ್ನು ನಾವು ನೋಡುವ ಕ್ರಮ ಬದಲಾಗಬೇಕು ಹಾಗೂ ಹೆಣ್ಣಿನ ಬಗೆಗಿನ ಸಮಾಜದ ಕೀಳು ದೃಷ್ಟಿಕೋನವನ್ನು ಪುನರ್ ಅವಲೋಕಿಸಬೇಕೆಂಬ ನಿಟ್ಟಿನಲ್ಲಿ ಹೊಸನೋಟ ಪುರಾಣ ಕಾವ್ಯಗಳಲ್ಲಿ ಸಾಧ್ಯವಾಯಿತು.

ದೈಹಿಕವಾದ ಭಿನ್ನತೆಯ ಕಾರಣದಿಂದ ಶೀಲ, ಪಾತಿವ್ರತ್ಯದ ನೆವದಲ್ಲಿ ಆಕೆಯು ಸಮಾಜಕ್ಕೆ ಹೆದರಿಯೇ ಬದುಕಬೇಕಾದ ಸ್ಥಿತಿಯಲ್ಲಿದ್ದಳು. ಜೈವಿಕವಾಗಿ ಹೆಣ್ಣಾಗಿರುವುದೇ ಪಾಪ ಎಂಬಂತೆ ಪುರುಷರೇ ನಿರೂಪಿಸುತ್ತಾ ಬಂದಿದ್ದರು. ಪುರಾಣ, ಇತಿಹಾಸದುದ್ದಕ್ಕೂ ಈಕೆ ತನ್ನ ಅಂತಸ್ತು, ಸ್ಥಾನಮಾನಗಳಿಗೆ ಸಂಬಂಧಿಸಿದಂತೆ ಸವಾಲುಗಳನ್ನು ಎದುರಿಸುತ್ತಲೇ ಬಂದಿದ್ದಾಳೆ. ಆದರೆ ಹೆಣ್ಣಿಗಿರುವ ಅದ್ಭುತವಾದ ಶಕ್ತಿಯ ಅರಿವು ಆಕೆಯನ್ನು ಹೀಗಳೆಯುವ ಸಮಾಜಕ್ಕೆ ತಿಳಿದಿಲ್ಲ. ವಿಜ್ಞಾನ ಮತ್ತು ತಂತ್ರಜ್ಞಾನದ ಸಂದರ್ಭದಲ್ಲಿರುವ ನಾವಿಂದು ಪುರಾಣ ಕಾವ್ಯಗಳಲ್ಲಿ ಚಿತ್ರಿಸಿರುವ ಹೆಣ್ಣು ಎಂಬ ಪರಿಕಲ್ಪನೆಯನ್ನು ದಾಟಿ ಬರಬೇಕಾದ ತುರ್ತು ಇದೆ. ಹೆಣ್ಣಿಗೆ ತೊಡಿಸಿರುವ ಸಂಕೋಲೆಗಳಿಂದ ಮುಕ್ತವಾಗಿ ಸಮಾನತೆಯ ಸತ್ವವನ್ನು ಲೋಕಕ್ಕೆ ಸಾರಬೇಕಿದೆ. ಗಂಡು ಎಂಬ ಮನಸುಗಳಲ್ಲಿ ಹೆಣ್ಣಿನ ಕುರಿತಾದ ಯಜಮಾನಿಕತ್ವದ ಹಾಗೂ ಸಾಂಪ್ರದಾಯಿಕ ಮನೋಭಾವದಿಂದ ಹೊರತರುವ ಪ್ರಯತ್ನದ ಜೊತೆಗೆ ಆಕೆಗೆ ದೇಹವೊಂದೇ ಅಲ್ಲ ಮನಸ್ಸೂ ಇದೆ ಎಂಬ ಪ್ರಜ್ಞೆಯನ್ನು ಬಿತ್ತುವ ಕೆಲಸ ಸಾದ್ಯವಾದರೆ ಹೆಣ್ಣು ಮಕ್ಕಳ ಬದುಕು ಸಹ್ಯವಾಗುತ್ತದೆ.

**ಆಧಾರ ಗ್ರಂಥಗಳು:**


1. 1.ಲಕ್ಷ್ಮೀಶನ ಜೈಮಿನಿ ಭಾರತ: ಸಂ.ಬಿ.ಎಸ್ ಸಣ್ಣಯ್ಯ, ಡಾ.ರಾಮೇಗೌಡ ಮೈಸೂರು ವಿ.ವಿ.1993
2. ಲಕ್ಷ್ಮೀಶ: ಸಂ. ವಿ.ಸೀತಾರಾಮಯ್ಯ. ಸಪ್ನ ಬುಕ್ ಹೌಸ್.2011
3. ಮಹಿಳೆ ಸಮಾಜ ಮತ್ತು ಸಂಸ್ಕೃತಿ: ಡಾ.ಆರ್.ಇಂದಿರಾ ಪ್ರಸಾರಾಂಗ ಕನ್ನಡ ವಿ.ವಿ. ಹಂಪಿ. 2002
4. ಕನ್ನಡ ಸಾಹಿತ್ಯ ಮತ್ತು ಪ್ರಭುತ್ವ: ಸಂ. ಬರಗೂರು ರಾಮಚಂದ್ರಪ್ಪ. ಕನ್ನಡ ಸಾಹಿತ್ಯ ಅಕಾಡೆಮಿ. 1993
5. 5.ಮಹಿಳಾ ಅಧ್ಯಯನ: ನೇಮಿಚಂದ್ರ. ಅಂಕಿತ ಪುಸ್ತಕ ಪ್ರಕಾಶನ. 2011